ಎಕ್ಸ್‌ಪ್ರೆಸ್ ರಸ್ತೆ ಬಡವರಿಗೆ ಜನಸಾಮಾನ್ಯರಿಗೆ, ರೈತ ವರ್ಗದವರಿಗೆ ಆಗತಕ್ಕಂಥ ಆಗದೇ ಇರತಕ್ಕಂಥಾದ್ದು ಏಕೆ. ಆ ರಸ್ತೆಯಲ್ಲಿ ಕಬ್ಬು ಹೊಡೆಯತಕ್ಕಂಥ ಬಡ ರೈತರು ಲಕ್ಷಾಂತರ ಗಾಡಿ ಓಡಿಸಬೇಕಾಗುತ್ತದೆ. ಇವರ ಮೇಲೆ ತೆರಿಗೆ ಹಾಕುತ್ತಾರೆ ಇವರು. ಬಡವರಿಗೆ ತೆರಿಗೆ ಹಾಕುತ್ತಾರೆ ಇವರು. ಅದುದರಿಂದ ಸರ್ಕಾರದ ಒಂದು ಸ್ಪಷ್ಟ ನಿಲುವು ಬೇಕು.

ಶ್ರೀ ಜೆ.ಹೆಚ್. ಪಟೇಲ್:- ಡೆಡಿಕೇಟೇಡ್ ರೋಡ್ ಎಂದರೆ ಬೇರೆ ಯಾರೂ ಅಥವಾ ಕಬ್ಬಿನ ಗಾಡಿ ಹೋಗುವ ಹಾಗೆ ಇಲ್ಲ. ಆ ಗಾಡಿ ಹೋಗುವುದಕ್ಕೆ ನಮ್ಮ ಸರ್ಕಾರಿ ರಸ್ತೆ ಇದೆ.

ಶ್ರೀ ಜೆ. ಬಸವಣ್ಣೆಪ್ಪ:- ಈಗ ಬೆಂಗಳೂರು ಮೈಸೂರು ರೋಡ್ ಎಷ್ಟು ಕಿಲೋಮೀಟರ್ ಇದೆ. ಈ ಎಕ್ಸ್‌ಪ್ರೆಸ್ ರೋಡ್ ಮಾಡುವುದರಿಂದ ಎಷ್ಟು ಕಿಲೋಮೀಟರ್ ಕಡಿಮೆ ಯಾಗುತ್ತದೆ?

ಶ್ರೀ ಶಿವಾನಂದ ಹೆಚ್ ಕೌಜಲಗಿ:- ಬೆಂಗಳೂರು ಮೈಸೂರು ರಸ್ತೆ 139 ಕಿಲೋಮೀಟರ್ ಇದೆ. ಈ ಹೊಸ ರಸ್ತೆ ಮಾಡುವುದರಿಂದ 129 ಕಿಲೋ ಮೀಟರ್ ಅಥವಾ ಇನ್ನು ಅದಕ್ಕಿಂತಲೂ ಕಡಿಮೆಯಾಗಬಹುದು.

ಅಧ್ಯಕ್ಷರು:- ಮಾನ್ಯ ಶಿವನಂಜಪ್ಪನವರೆ, ತಾವು ಕಳುಹಿಸಿರುವ ಪ್ರಶ್ನೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿದ್ದಾರೆ. ಇವತ್ತು ಬರುವುದಿಲ್ಲ. ಅದು ನೀರಾವರಿ ಇಲಾಖೆಯ ಪ್ರಶ್ನೆಯನ್ನು ತೆಗೆದುಕೊಂಡಾಗ ಬರುತ್ತದೆ. ನೀರಾವರಿ ಮಂತ್ರಿಗಳು ಉತ್ತರ ಕೊಡುವ ದಿವಸ ಬರುತ್ತದೆ.

ವಿಷಯ:- ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿಯಲ್ಲಿ ವಿದ್ಯುತ್ ಕಡಿಮೆ ವೋಲ್ಟೇಜ್.

ಚುಕ್ಕೆ ಗುರುತಿನ ಪ್ರಶ್ನೆ ಸಂ 68(499)

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ)

ಮಾನ್ಯ ಉಪ ಮುಖ್ಯಮಂತ್ರಿಗಳು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಸಿ.ಎಸ್. ಪುರ ಹೋಬಳಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವೋಲ್ಟ್‌ಜ್ ತುಂಬ ಕಡಿಮೆ ಇರುವುದರಿಂದ ರೈತರ ಪಂಪ್‌ಸೆಟ್‌ಗಳು ನಡೆಯದಿರುವುದು ಹಾಗೂ ಅಕ್ಕಿ, ರಾಗಿ ಹಾಗೂ ಇತರೆ ಪದಾರ್ಥಗಳನ್ನು ಹಿಟ್ಟು ಮಾಡಲು ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಜೆ.ಹೆಚ್. ಪಟೇಲ್ : ಉಪ ಮುಖ್ಯ ಮಂತ್ರಿಗಳು

ಅ) ಹೌದು.

ಆ) ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ತುಮಕೂರು ಜಿಲ್ಲೆಯಲ್ಲಿ 251 ಕೆ.ವಿ.ಎಗೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮಾಂಡ್ ಉಳ್ಳ ಎಚ್.ಟಿ. ಕೈಗಾರಿಕೆಗಳಿಗೆ ಶೇಕಡ 25ರಷ್ಟು ಡಿಮಾಂಡ್ ಕಡಿತವನ್ನು ವಿಧಿಸಲಾಗಿದೆ. ಈ ಕ್ರಮದಿಂದ ವೋಲ್ಟ್‌ೇಜ್ ಮಟ್ಟದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಣೆ ಉಂಟಾಗಲಿದೆ.
2. ಈಗಾಗಲೇ ತುಮಕೂರು ತಾಲ್ಲೂಕಿನ ಹೆಬ್ಬೂರು ಗ್ರಾಮದಲ್ಲಿ ಒಂದು 66:11 ಕೆವಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡಲಾಗುತ್ತಿದ್ದು ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಉಪ ಕೇಂದ್ರವು ಕಾರ್ಯರಂಭ ಮಾಡಿದ ನಂತರ ಸಿ.ಎಸ್. ಪುರ ಹೋಬಳಿಯ ಗ್ರಾಮಗಳಿಗೆ ಇಲ್ಲಿಂದಲೇ ನೇರವಾಗಿ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು.
3. ಸಿ.ಎಸ್. ಪುರ ಅಥವಾ ಕಲ್ಲೂರ್ ಕ್ರಾಸಿನಲ್ಲಿ ಒಂದು 110:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಶ್ರೀ ಜೆ.ಎಸ್. ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಲೋ ವೋಲ್ಟೇಜ್ ಬಹಳ ಕಡಿಮೆ ಇರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಅವರು ಎರಡನೆ ಪ್ರಶ್ನೆಗೆ ಉತ್ತರ ಕೊಡುವಾಗ ತುಮಾಕೂರು ಜಿಲ್ಲೆಯಲ್ಲಿ 251 ಕೆವಿಎಗೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮ್ಯಾಂಡ್‌ವುಳ್ಳ ಹೆಚ್.ಟಿ. ಕೈಗಾರಿಕೆಗಳಿಗೆ ಶೇಕಡ 25 ರಷ್ಟು ಡಿಮ್ಯಾಂಡ್ ಕಡಿಮೆ ಕಡಿತವನ್ನು ವಿಧಿಸಲಾಗಿದೆ. ಈ ಕ್ರಮದಿಂದ ವೋಲ್ಟ್‌ೇಜ್ ಮಟ್ಟದಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಗುತ್ತದೆಂದು ಹೇಳಿದ್ದಾರೆ. ಇಲ್ಲೆ ನಾನು ಕೇಳಿರುವುದು ಸಿಎಸ್‌ಪುರ ಮತ್ತು ಅದರ ಹಳ್ಳಿಗಳಲ್ಲಿ. ಆದರೆ, ನೀವು ಇಡೀ ತುಮಕೂರು ಜಿಲ್ಲೆಯದ್ದು ಹೇಳಿಬಿಟ್ಟು , ಆ ಸಿ.ಆರ್. ಪುರವನ್ನು ಬಿಟ್ಟು ಬಿಟ್ಟರಲ್ಲ. ಎಲ್ಲಿ ಕಡಿಮೆಯಾಗಿದೆ. ಸಿ.ಎಸ್. ಪುರಕ್ಕೆ ಎಲ್ಲಿ ಇಂಪ್ರೂವ್ ಮಾಡಿಕೊಟ್ಟಿದ್ದೀರಿ, ಇನ್ನು ಎರಡನೆಯದರಲ್ಲಿ ಈಗಾಗಲೇ ತುಮಕೂರು ತಾಲ್ಲೂಕಿನ ಹೆಬ್ಬೂರು ಗ್ರಾಮದಲ್ಲೂ ಒಂದು ಸಬ್ ಸ್ಟೇಷನ್ ಮಾಡುತ್ತಿದ್ದೇವೆ, ಅದು ಆದಮೇಲೆ ಸಿ.ಎಸ್. ಮರ ಹೋಬಳಿಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆ ಮೊದಲನೆ ಭಾಗದ್ದು ಉತ್ತರ ಸರಿ, ಇಲ್ಲ. ಅವರು ಸರಿಯಾಗಿ ಪ್ರಶ್ನೆ ಅರ್ಥ ಮಾಡಿಕೊಂಡ ಹಾಗೆ ಕಾಣಲಿಲ್ಲ, ಮತ್ತು ಸಿ.ಎಸ್. ಪುರ ಹೋಬಳಿಗೆ ಸುಮಾರು 50 ಹಳ್ಳಿಗಳಲ್ಲಿ ಇವತ್ತಿನ ದಿವಸ ಕುಡಿಯುವ ನೀರು ಇಲ್ಲ, ಮಿನಿ ವಾಟರ್ ಸ್ಕೀಮ್ ಇನ್‌ವೆಸ್ಟ್ ಮಾಡಿದ್ದೇವೆ, ಅದು ನಡೆಯುತ್ತಾ ಇಲ್ಲ. ಸಿ.ಆರ್. ಪುರ ಹೋಬಳಿ ಹೆಡ್ ಕ್ವಾರ್ಟ್ರ್ಸ್‌ನಲ್ಲಿ ಎರಡು ತಿಂಗಳಿನಿಂದ ಕರೆಂಟ್ ಇಲ್ಲ. ಟ್ಯಾಂಕಿಂಗೆ ನೀರು ಸಹ ಹೋಗುತ್ತಾ ಇಲ್ಲ. ಈ ಪರಿಸ್ಥಿತಿ ಇರುವುದರಿಂದ ಈ ಪ್ರಶ್ನೆಯನ್ನು ಸರಿಯಾದ ರೀತಿಯಲ್ಲಿ ಸರ್ಕಾರ ಪರಿಗಣಿಸಿಲ್ಲ ಎಂದು ನನ್ನ ಭಾವನೆ. ಸಿ.ಎಸ್.ಪುರ ಹೋಬಳಿ ಇರತಕ್ಕಂಥ ಹಳ್ಳಿಗಳಿಗೆ ವಿದ್ಯುತ್‌ನ್ನು ಸಮರ್ಪಕವಾಗಿ ಎಂದರೆ ಕೊನೆಯ ಪಕ್ಷ ದಿವಸಕ್ಕೆ 6 ಅಥವಾ 8 ಗಂಟೆ ಕೊಡತಕ್ಕಂಥ ವ್ಯವಸ್ಥೆ ಮಾಡುವುದಕ್ಕೆ ಆಗುವುದಿಲ್ಲವೆ?

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳುತ್ತಾರೆ. ಉತ್ತರ ಸರಿಯಿಲ್ಲ ಎಂದು. ಆದರೆ ಅವರು ಕೇಳಿರುವ ಪ್ರಶ್ನೆ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿಯಲ್ಲಿ ವಿದ್ಯುತ್ ಸರಬರಾಜಿನ ಲೋಲ್ಟೇಜ್ ತುಂಬಾ ಕಡಿಮೆ ಇರುವುದರಿಂದ ರೈತರ ಪಂಪ್‌ಸೆಟ್ಟುಗಳು ನಡೆಯುದೆ ಇರುವುದು; ಹಾಗೆಯೇ ಕರೆಂಟ್ ಇಲ್ಲದೆ, ಅಕ್ಕಿ ರಾಗಿ ಇತರ ಪದಾರ್ಥಗಳನ್ನು ಹಿಟ್ಟು ಮಾಡಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹೌದು, ಇದಲ್ಲದೆ ಇನ್ನು ಏನು ಹೇಳಬೇಕು. ಹಾಗಿದ್ದರೆ ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಎಂದರೆ ವೋಲ್ಟೇಜ್ ಬಹಳ ಕೆಳಗೆ ಹೋದಾಗ ನಾವು ಬೇರೆ ಉದ್ಯಮಗಳಿಗೆ ಕೊಡತಕ್ಕಂಥ ವಿದ್ಯುತ್‌ನ್ನು ಡಿಮ್ಯಾಂಡ್ ಕಟ್ ಎಂದರೆ ನಾವು ಅವರಿಗೆ 200 ಹಾರ್ಸ್ ಪವರ್ ವಿದ್ಯುತ್‌ನ್ನು ಸ್ಯಾಂಕ್ಷನ್ ಮಾಡಿದರೆ, ನೀವು ಈ 200 ಹಾರ್ಸ್ ಪವರ್ ರನ್ ಮಾಡಬೇಡಿ. 150 ಹಾರ್ಸ್ ಪವರನ್ನೆ ರನ್ ಮಾಡಿ ಎಂದು ಹೇಳುವುದು ಡಿಮ್ಯಾಂಡ್ ಕಟ್. ಪವರ್ ಕಟ್ ಎಂದರೆ ಪವರ್ ಸಪ್ಲೈ ಮಾಡದಂತೆ, ಅದು-6 ಗಂಟೆಯೊ ಅಥವಾ ನಮ್ಮ ಅವಶ್ಯಕತೆಗೆ ತಕ್ಕಂತೆ ಕೆಲವು ಗಂಟೆಗಳು ಕಾಲ ಪವರ್ ಕಟ್ ಮಾಡುತ್ತೇವೆ ಇಲ್ಲದಿದ್ದರೆ ಡಿಮ್ಯಾಂಡ್ ಕಟ್ ಮಾಡುತ್ತೇವೆ. ಡಿಮ್ಯಾಂಡ್ ಕಟ್ ಮಾಡಿದರೆ ನಮಗೆ ವೋಲ್ಟೇಜ್ ಇಂಪ್ರೂವ್ ಆಗುತ್ತದೆ ಎಂದು ಬಹಳ ಜನ ನಮಗೆ ಸಲಹೆ ಕೊಟ್ಟಿದ್ದರಿಂದ ಮಾಡಿದ್ದೇವೆ. ಮಾಡಿದರೂ ಸಹ ಅನುಕೂಲವಾಗಿಲ್ಲ. ಈಗ ಸಬ್ ಸ್ಟೇಷನ್‌ನ್ನು ಹಾಕುವುದು ಹೆಚ್ಚಿನ ಶಕ್ತಿಯ ಲೈನ್‌ಗಳನ್ನು ಎಳೆದು ಕೊಡುವುದು ಅದು ಒಂದು ದಿನಕ್ಕೆ 2 ದಿನಕ್ಕೆ ಆಗುವ ಕೆಲಸವಲ್ಲ. ಅದಕ್ಕೋಸರ ಮಾನ್ಯ ಸದಸ್ಯರ ತುಮಕೂರು ಜಿಲ್ಲೆಯಲ್ಲಿ 251 ಕೆವಿಎಗೆ ಮೇಲ್ಪಟ್ಟ ಕಂಟ್ರಾಕ್ಟ್ ಡಿಮ್ಯಾಂಡನ್ನು ಕಟ್ ಮಾಡಿದ್ದೇವೆ. ಈಗಾಗಲೇ ತುಮಕೂರು ತಾಲ್ಲೂಕಿನ ಹೆಬ್ಬೂರು ಗ್ರಾಮದಲ್ಲಿ ಒಂದು 66:11 ಕೆವಿಎ ಉಪಕೇಂದ್ರವನ್ನು ನಿರ್ಮಾಣ ಮಾಡುತ್ತಿದ್ದು, ಅದು ಪ್ರಗತಿಯಲ್ಲಿದೆ. ಆ ಉಪಕೇಂದ್ರ ಕಾರ್ಯಾರಂಭ ಮಾಡಿದನಂತರ ಸಿ.ಎಸ್.ಪುರ ಹೋಬಳಿ ಗ್ರಾಮಗಳಿಗೆ ಅಲ್ಲಿಂದಲೇ ನೇರವಾಗಿ ವಿದ್ಯುತ್‌ನ್ನು ಸರಬರಾಜು ಮಾಡಲಾಗುವುದು. ಸಿ.ಎಸ್.ಪುರ ಅಥವಾ ಕಲ್ಲೂರು ಕ್ರಾಸ್‌ನಲ್ಲಿ ಒಂದು 110:11 ಕವಿಎ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣಮಾಡುವ ಪ್ರಸ್ತಾಪನೆಯು ಮಂಡಲಿಯ ಪರಿಶೀಲನೆಯಲ್ಲಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ, ಹೆಬ್ಬೂರು ಗ್ರಾಮದಲ್ಲಿ ಒಂದು ಉಪಕೇಂದ್ರ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ ಮತ್ತು ಹೆಬ್ಬೂರು ನನ್ನ ಕ್ಷೇತ್ರದಲ್ಲಿ ಬರುತ್ತದೆ. ಈ ಹೆಬ್ಬೂರು ಉಪಕೇಂದ್ರದಿಂದ ಸಿ.ಎಸ್. ಪುರ ಹೋಬಳಿಗೆ ನಾವು ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ದಯಮಾಡಿ ಈ ಹೆಬ್ಬೂರಿನಲ್ಲಿ ಇರತಕ್ಕಂಥ ಈ ವಿದ್ಯುತ್ ಉಪಕೇಂದ್ರ ಏನಿದೆ ಅದನ್ನು ಸುಮಾರು 3 ವರ್ಷಗಳ ಹಿಂದೆ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅದಕ್ಕೆ ಅಡಿಗಲ್ಲು ಹಾಕಿದರು. ಇದುವರೆಗೂ ಅದು ಏನು ಕೆಲಸ ನಡೆಯುತ್ತಿದೆಯೇ ಇಲ್ಲವೇ ಗೊತ್ತಿಲ್ಲ. ಆ ರೀತಿ ಇದೆ. ಮತ್ತೆ ಯಾವಾಗ ಇದು ಕೆಲಸ ಪ್ರಾರಂಭ ಮಾಡುತ್ತದೆ ಎಂದು ಉತ್ತರ ಹೇಳಬೇಕು. ಮತ್ತೇ ಈ ಉಪಕೇಂದ್ರದಿಂದ ನಾವು ಸಿ.ಎಸ್.ಪುರ ಹೋಬಳಿ ಗುಬ್ಬಿ ತಾಲ್ಲೂಕಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಉಪಕೇಂದ್ರ

ದಿಂದ ಶೇಕಡ ಎಷ್ಟು ಭಾಗ ವಿದ್ಯುತ್ತ್‌ನ್ನು ನೀವು ಗುಬ್ಬಿ ಕ್ಷೇತ್ರಕ್ಕೆ ಎಂದರೆ ಹೆಬ್ಬೂರು ಕುಣಿಗಲ್ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ, ಅದಕ್ಕೆ ಎಷ್ಟು ಕೊಡುತ್ತೀರಿ ಮತ್ತು ಈ ಉಪಕೇಂದ್ರ ಯಾವಾಗ ಪ್ರಾರಂಭವಾಗುತ್ತದೆ ಎಂದು ದಯಮಾಡಿ ತಿಳಿಸಬೇಕು?

ಶ್ರೀ ಜೆ. ಹೆಚ್ ಪಟೇಲ್:- ಈ ಉಪಕೇಂದ್ರಕ್ಕೆ ಯಾರ ಕಾಲದಲ್ಲಿ ಕಲ್ಲು ಹಾಕಿದರೋ ಅದು ನನಗೆ ಗೊತ್ತಿಲ್ಲ. ಆದರೆ ನಾವು ಈಗ ಕೆಲಸ ಶುರು ಮಾಡುತ್ತೇವೆ. ಇಂತಹ ಉಪಕೇಂದ್ರಗಳಲ್ಲಿ ಕೆಲಸ ಶುರು ಮಾಡಿದಮೇಲೆ ಸಾಮಾನ್ಯವಾಗಿ ಇನ್ನು 4-5 ತಿಂಗಳಲ್ಲಿ ಕಾರ್ಯಾರಂಭ ಮಾಡುತ್ತೇವೆ. ಇದರಲ್ಲಿ ಅವರಿಗೇ ಜಾಸ್ತಿ ವಿದ್ಯುತ್ ಕೊಡುತ್ತಾರೆ, ಮತ್ತು ನಮ್ಮ ಕ್ಷೇತ್ರಕ್ಕೆ ಕಡಿಮೆ ಮಾಡುತ್ತಾರೆ ಏನೋ ಎನ್ನುವ ಸಂಶಯ ಮಾನ್ಯ ಸದಸ್ಯರಿಗೆ ಇದೆಯಲ್ಲ ಅದು ಸರಿಯಲ್ಲ. ವಿದ್ಯುತ್ ಸ್ವಲ್ಪ ಸ್ವಲ್ಪ ಭಾಗ ಕೊಟ್ಟು ಬೇರೆ ಕಡೆ ಹಂಚುವುದಕ್ಕೆ ಬರುವುದಿಲ್ಲ. ಕೊಟ್ಟರೆ ಪೂರ್ತಿ ಕೊಡಬೇಕಾಗುತ್ತದೆ. ಆದರೆ ನಿಮ್ಮ ಕ್ಷೇತ್ರದಲ್ಲಿ ಇರತಕ್ಕಂಥ ವಿದ್ಯುತ್ ಅವರ ಕ್ಷೇತ್ರಕ್ಕೆ ಕೊಡುವಾಗ ಅಲ್ಲಿನ ಅವಶ್ಯಕತೆ ಏನು ಅಲ್ಲಿ ಲೋಡ್ ಏನು ವರ್ಕ್ ಡಿಮ್ಯಾಂಡ್ ಏನು ಅದನ್ನು ನೋಡಿಕೊಂಡು ಕೊಡುತ್ತೇವೆ.

ಅಧ್ಯಕ್ಷರು:- ಮಾನ್ಯ ನಂಜೇಗೌಡರೆ ತಮ್ಮ ಪ್ರಶ್ನೆ ಮತ್ತು ವಾಟಾಳ್ ನಾಗರಾಜ್ ಅವರ ಪ್ರಶ್ನೆ ಒಂದೇ ತರಹದ ಸ್ವರೂಪದ್ದು ಇದೆ. ಅವುಗಳನ್ನು ಲಾಸ್ಟ್‌ನಲ್ಲಿ ತೆಗೆದುಕೊಳ್ಳೋಣ. ಬಂದರೆ ಸಪ್ಲಿಮೆಂಟರಿ ಜಾಸ್ತಿ ಇರಬಹುದು. ಅದು ಪಬ್ಲಿಕ್ ಇಂಪಾರ್ಟೆನ್ಸ್ ವಿಷಯ.

ಶ್ರೀ ಜಿ.ಎಸ್. ಶಿವನಂಜಪ್ಪ:- ನಾನು ಉಪಪ್ರಶ್ನೆ ಹಾಕುವುದಕ್ಕೆ ಅವಕಾಶ ಕೊಟ್ಟಿಲ್ಲ ತಾವು. 40-50 ಜನ ಬಂದು ನನ್ನ ರೂಮ್‌ನಲ್ಲಿ ಕುಳಿತಿದ್ದಾರೆ. ಏನು ಮೊದಲೆ ನಾನು? ಇವರು ಹೆಬ್ಬೂರಿನಿಂದ ಅವರಿಗೆ ಕೊಡುತ್ತೇವೆ ಎಂದು ಒಂದು ಮಾತು ಹೇಳಿದ್ದಾರೆ. ಸಿ.ಎಸ್. ಪುರ ಹೋಬಳಿಗೆ ಹೆಬ್ಬೂರಿನಿಂದ ಕೊಡುವುದಕ್ಕೆ ಆಗುವುದಿಲ್ಲ. ಅದು 30-40 ಕಿ.ಮೀ ದೂರ ಇದೆ. ಎರಡನೆಯದು ಕಲ್ಲೂರು ಕ್ರಾಸ್ ಅಥವಾ ಸಿ.ಎಸ್. ಪುರದಲ್ಲಿ ಒಂದು ಉಪಕೇಂದ್ರ ಮಾಡುತ್ತೇವೆ ಎಂದು ಹೇಳಿದ್ದಾರೆ. ಕಲ್ಲೂರು ಕ್ರಾಸ್‌ನಲ್ಲಿ ಈಗಾಗಲೇ ಉಪಕೇಂದ್ರ ಮಂಜೂರಾಗಿದೆ. ಕಲ್ಲೂರ್ ಕ್ರಾಸ್‌ನಲ್ಲಿ ಅಲ್ಲ, ಕಲ್ಲೂರಿಗೆ. ಅದರಿಂದನೂ ನಮಗೆ ಸಿ.ಎಸ್. ಪುರ ಹೋಬಳಿಗೆ ವಿದ್ಯುತ್ ಒದಗಿಸುವುದಕ್ಕೆ ಆಗುವುದಿಲ್ಲ. ಸುಮಾರು 15-20 ಕಿ.ಮೀ ದೂರವಾಗುತ್ತದೆ. ಹಿಂದಿನ ಸರ್ಕಾರದವರು ಸಿ.ಎಸ್. ಪುರ ಹೋಬಳಿಗೆ ಒಂದು ಗ್ರಾಮದಲ್ಲಿ ನಾವು ಉಪಕೇಂದ್ರವನ್ನು ಮಾಡಿಕೊಡುತ್ತೇವೆ ಎಂದು ಅಶ್ವಾಸನೆ ಕೊಟ್ಟಿದ್ದಾರೆ ಮತ್ತು ಕೆಟಗರಿಕಲ್ಲಾಗಿ ಅಂತಹ ಅವರು ಹೇಳಿದ್ದಾರೆ. ಅದು ಏಕೆ ಹೇಳಲಿಲ್ಲವೋ ಇದರಲ್ಲಿ ಮಿಸ್‌ಲೀಡ್ ಮಾಡುತ್ತಿದ್ದಾರೆ.

ಅಧ್ಯಕ್ಷರು:- ನೇರವಾಗಿ ಕೇಳಿ, ನಿಮ್ಮ ಉಪಪ್ರಶ್ನೆ ನಿಮಗೆ ಸಿ.ಎಸ್. ಪುರದಲ್ಲಿ ಆಗಬೇಕು ಅಲ್ಲವೆ. ಅದಕ್ಕೆ ಏಕೆ ಸಮಯ. ಅದಕ್ಕೆ ನೀವು ಅಷ್ಟೆ ಜವಾಬ್ದಾರಿಯಿಂದ ಉತ್ತರ ಕೊಡಿ. ಮಾಡೋಣವೆಂದು ಹೇಳಿ.

ಶ್ರೀ ಜಿ.ಎಸ್. ಶಿವನಂಜಪ್ಪ:- ಅಲ್ಲಿ ದಿವಸಕ್ಕೆ 6 ಗಂಟೆಯಾದರೂ ಮೋಟಾರ್ ಓಡುವಂತಹ ಪರಿಸ್ಥಿತಿ ನಿರ್ಮಾಣ ಮಾಡಿಕೊಡಲಿ.

ಶ್ರೀ ಜೆ.ಹೆಚ್. ಪಟೇಲ್:- ಇವರಿಗೆ ವಿದ್ಯುತ್ ಜೋಗ್ ಜಲಪಾತದಿಂದ ಬರುತ್ತದೆ. ಅದು ಹೆಬ್ಬೂರಿನಿಂದಾಗಲಿ ಗಬ್ಬೂರಿನಿಂದಾಗಲಿ ಬರುತ್ತಿಲ್ಲ. ಇವರ ಕ್ಷೇತ್ರಕ್ಕೆ ಬರುವಂತಹ ವಿದ್ಯುತ್‌ನ್ನು ಸಮರ್ಪಕವಾಗಿ ಕೊಡುವುದಕ್ಕೆ ಸಬ್ ಸ್ಟೇಷನ್ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ನಾವು ಕಟ್ಟುವಂತಹ ಸಬ್ ಸ್ಟೇಷನ್ ಕೇಂದ್ರ ಇವರ ಕ್ಷೇತ್ರದಲ್ಲಿ ಆಗಬೇಕು ಎನ್ನುವಂತ ಅಭಿಪ್ರಾಯವಿದ್ದರೆ ಅದನ್ನು ಮಾಡೋಣವೆಂದು ಹೇಳಿದ್ದುದು.

ವಿಷಯ: - ಕಳ್ಳಂಬೆಳ್ಳದಲ್ಲಿ ಕುಡಿಯುವ ನೀರಿನ ಯೋಜನೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ (70) (406)

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಕುಡಿಯುವ ನೀರಿನ ಯೋಜನೆ ಕಾರ್ಯಗತ-ಗೊಳಿಸಲು ಕೈಗೊಂಡಿರುವ ಎನ್. ಆರ್. ಡಬ್ಲ್ಯೂ.ಎಸ್.ಎ.ಆರ್.ಡಬ್ಲ್ಯೂ. ಎಸ್ ಮತ್ತು ಎಮ್.ಡಮ್ಲ್ಯೂ ಎಸ್ ಯೋಜನೆಗಳಾವುವು.

ಆ) ಕುಡಿಯುವ ನೀರಿಗೆ ತೊಂದರೆಯಾಗಿರುವ ಗ್ರಾಮಗಳಾವುವು?

ಇ) ಕಳೆದ ಮೂರು ತಿಂಗಳಿಂದ ಕುಡಿಯುವ ನೀರಿಗೆ ಸರ್ಕಾರದಿಂದ ಖರ್ಚಾಗಿರುವ ಹಣ ಎಷ್ಟು?

ಈ) ಕುಡಿಯುವ ನೀರಿನ ಬವಣೆ ನೀಗಿಸಲು ಸರ್ಕಾರದ ವಿಶೇಷ ಯೋಜನೆಗಳಾವುವು?

ಶ್ರೀ ಎಂ.ಪಿ. ಪ್ರಕಾಶ್ : ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ ಸಚಿವರು

ಅ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಕುಡಿಯುವ ನೀರಿನ ಯೋಜನೆ ಕಾರ್ಯಗತಗೊಳಿಸಲು ಕೈಗೊಂಡಿರುವ ಯೋಜನೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

(ಗ್ರಾಮಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ)

1. ಎನ್‌ಆರ್‌ಡಬ್ಲ್ಯೂಎಸ್ - ಯೋಜನೆಗಳು
2. ಎಆರ್‌ಡಬ್ಲ್ಯೂಎಸ್ - 8 ಯೋಜನೆಗಳು[16]
3. ಎಮ್‌ಡಬ್ಲ್ಯೂಎಸ್ - 26 ಯೋಜನೆಗಳು